RNU AIR DHARWAD

APRIL 20, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ನಾಡಿನ ಸಾಂಸ್ಕೃತಿಕ ನಾಯಕ,** ಜಗಜ್ಯೋತಿ ಶ್ರೀ ಬಸವೇಶ್ವರರ ಜಯಂತ್ಯುತ್ಸವ; ನಾಡಿನಾದ್ಯಂತ ಸಂಭ್ರಮ; ಗಣ್ಯರ ಶುಭಾಶಯ.
- **ಪಶ್ಚಿಮಘಟ್ಟದ, ಅಪರೂಪದ,** ನಿಶಾಚರಿ ಕಪ್ಪೆ ಪ್ರಭೇದಕ್ಕೆ, 'ಕಾಳಿ ಇರುಳುಗಪ್ಪೆ' ಎಂದು, ನಾಮಕರಣ.
- **ಗೃಹ ಆರೋಗ್ಯ ಯೋಜನೆ;** ಆಶಾ ಕಾರ್ಯಕರ್ತೆಯರಿಂದ, ರಾಜ್ಯದ 60 ಲಕ್ಷದ 38 ಸಾವಿರ ಮನೆ ಭೇಟಿ, ಆರೋಗ್ಯ ಜಾಗೃತಿ.
- **ಕಲಬುರಗಿ ಜೋಳದ ರೊಟ್ಟಿ;** ನಾಲ್ಕು ರಾಷ್ಟ್ರಗಳಿಗೆ ರಫ್ತು.

<><><>

**ಈಗ ವಾರ್ತೆಗಳ ವಿವರ**

<><><>

**ನಾಡಿನ ಸಾಂಸ್ಕೃತಿಕ ನಾಯಕ,** ಜಗಜ್ಯೋತಿ ಶ್ರೀ ಬಸವೇಶ್ವರರ ಜಯಂತ್ಯುತ್ಸವವಿಂದು. ನಾಡಿನಾದ್ಯಂತ ಸಂಭ್ರಮ ಮನೆ ಮಾಡಿದೆ. ವೈಶಾಖ ಮಾಸದ ಶುದ್ಧ ತದಿಗೆಯಂದು, ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದಲ್ಲಿ ವಿಜೃಂಭಣೆಯಿಂದ, ಬಸವ ಜಯಂತಿ ಆಚರಿಸಲಾಗುತ್ತದೆ. ನಾಡಿನ ವಿವಿಧೆಡೆ, ಅಲಂಕರಿಸಿದ ಜೋಡೆತ್ತಿನ ಬಂಡಿಗಳಲ್ಲಿ, ಬಸವಣ್ಣನವರ ಭಾವಚಿತ್ರದ ಮೆರವಣಿಗೆ, ವಚನ ಗಾಯನ, ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು, ಆಯೋಜಿತವಾಗಿವೆ. ಸಾಮಾಜಿಕ ಸಮಾನತೆ ಹಾಗೂ ಕಾಯಕವೇ ಕೈಲಾಸ ಎಂಬ ತತ್ವಗಳನ್ನು ಬೋಧಿಸಿದ, 12ನೇ ಶತಮಾನದ ಸಮಾಜ ಸುಧಾರಕ, ದಾರ್ಶನಿಕ ಮತ್ತು ಲಿಂಗಾಯತ ಧರ್ಮದ ಸ್ಥಾಪಕ ಬಸವಣ್ಣನವರ ಜನ್ಮ ದಿನೋತ್ಸವದ ಆಚರಣೆ. ಜಾತೀಯತೆ, ಲಿಂಗ ತಾರತಮ್ಯವನ್ನು ವಿರೋಧಿಸಿದ, 'ಅನುಭವ ಮಂಟಪ'ದ ಮೂಲಕ, ಪ್ರಜಾಪ್ರಭುತ್ವದ ಅಡಿಪಾಯ ಹಾಕಿದ, ಬಸವಣ್ಣನವರ ವಿಚಾರಗಳನ್ನು ಸ್ಮರಿಸಲಾಗುತ್ತದೆ.

<><><>

**ರಾಷ್ಟ್ರಪತಿ ದ್ರೌಪದಿ ಮುರ್ಮು,** ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ರಾಜ್ಯಪಾಲ ಥಾವರಚಂದ ಗೆಹ್ಲೋಟ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ನಾಡಿನ ಸಾಂಸ್ಕೃತಿಕ ನಾಯಕ, ಬಸವೇಶ್ವರ ಜಯಂತಿಯ ಶುಭಾಶಯ ಕೋರಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು,** ಬಸವ ಜಯಂತಿಯ ಶುಭಾಶಯ ಕೋರಿದ್ದು, ಜಗದ್ಗುರು ಬಸವೇಶ್ವರರ ಆಳವಾದ ಜ್ಞಾನ, ಸಮಾಜಮುಖಿ ದೃಷ್ಟಿಕೋನ, ಮತ್ತು ವಂಚಿತರನ್ನು ಮೇಲೆತ್ತಲು ಅವರ ಅವಿಶ್ರಾಂತ ಪ್ರಯತ್ನಗಳು, ತಮಗೆ ಸದಾ, ಮಾರ್ಗದರ್ಶಿ ಎಂದಿದ್ದಾರೆ.

<><><>

**ಮುಖ್ಯಮಂತ್ರಿ ಸಿದ್ದರಾಮಯ್ಯ,** ಮೈಸೂರು ಕಲಾಮಂದಿರದಲ್ಲಿ, ಇಂದು ಮಧ್ಯಾಹ್ನ 12 ಗಂಟೆಗೆ ಆಯೋಜಿತ, ಬಸವ ಜಯಂತ್ಯುತ್ಸವದಲ್ಲಿ, ಬಸವಶ್ರೀ ಪ್ರಶಸ್ತಿ ಪ್ರದಾನಿಸಲಿದ್ದಾರೆ.

<><><>

**ಬಸವ ಜಯಂತಿ ಅಂಗವಾಗಿ,** ಧಾರವಾಡದ ಶ್ರೀ ಉಳವಿ ಚನ್ನಬಸವೇಶ್ವರ ಧರ್ಮ ಫಂಡ್‌ಸಂಸ್ಥೆ, ಇಂದು ಬೆಳಗ್ಗೆ 7:15ಕ್ಕೆ, ಷಟ್ ಸ್ಥಲಧ್ವಜಾರೋಹಣ, ವಿಶ್ವಗುರು ಬಸವಣ್ಣನವರ ಭಾವಚಿತ್ರದೊಂದಿಗೆ, ನೂರಾರು ಜೋಡೆತ್ತುಗಳು ಹಾಗೂ ವಾದ್ಯ ಮೇಳಗಳೊಂದಿಗೆ ಭವ್ಯ ಮೆರವಣಿಗೆ ಆಯೋಜಿಸಿದೆ.

<><><>

**ಉತ್ತರಕನ್ನಡ ಜಿಲ್ಲೆ,** ದಾಂಡೇಲಿ ಅಣಶಿ, ಕಾಳಿ ಹುಲಿ ಸಂರಕ್ಷಿತ ಅಭಯಾರಣ್ಯ ವ್ಯಾಪ್ತಿಯ, ಅಂಕೋಲಾ ವಿಭಾಗದ,ಮತ್ತಿಕೆರೆ ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ, ಸಿ.ಆರ್.ನಾಯ್ಕ ಹಾಗೂಫಾರೆಸ್ಟರ್ ರಮೇಶ ಬಡಿಗೇರ, ವಿಶಿಷ್ಟ ಪ್ರಬೇಧದ, ಅಳಿವಿನಂಚಿನ ಕಾಳಿ ಇರುಳುಗಪ್ಪೆಯನ್ನು, ಪತ್ತೆ ಹಚ್ಚಿದ್ದಾರೆ. ಪಶ್ಚಿಮಘಟ್ಟ ಪ್ರದೇಶದ, ಅಪರೂಪದ ನಿಶಾಚರಿ ಕಪ್ಪೆ ಪ್ರಭೇದಕ್ಕೆ, 'ಕಾಳಿ ನೈಟ್ ಫ್ರಾಗ್' ಎಂದು ನಾಮಕರಣ ಮಾಡಲಾಗಿದೆ. 'ಪೀರ್ ಜೆ' ಎಂಬ, ಅಂತಾರಾಷ್ಟ್ರೀಯ ಜರ್ನಲ್‌ನಲ್ಲಿ, ಸಂಶೋಧನಾ ವರದಿ ಪ್ರಕಟವಾಗಿದೆ. ಜಗತ್ತಿನ ಗಮನ ಸೆಳೆಯುತ್ತಿದೆ.

<><><>

***ಬೆಂಗಳೂರಿನ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ, ಸಹಾಯಕ ಪ್ರಾಧ್ಯಾಪಕಿಯಾಗಿರುವ, ಡಾಕ್ಟರ್ ಪ್ರೀತಿ ಹೆಬ್ಬಾರ ಹಾಗೂ ಅವರ ಸಂಶೋಧನಾ ತಂಡದ ವಿಜ್ಞಾನಿ ಸಿ.ಕೆ. ಅರವಿಂದ, ಈ ಅಪರೂಪದ ಕಪ್ಪೆಯ, ಸ್ವಾಬ್ ಪರೀಕ್ಷೆ ಕೈಗೊಂಡು, ಡಿ.ಎನ್.ಎ.ಯಲ್ಲಿ, ಶೇಕಡ 4ರಷ್ಟು ವ್ಯತ್ಯಾಸ ಕಂಡುಕೊಂಡ ಪರಿಣಾಮ, ಅಳಿವಿನಂಚಿನಲ್ಲಿರುವ, ಅಪರೂಪದ, ಕಾಳಿ ನೈಟ್ ಫ್ರಾಗ್ ವರ್ಗೀಕರಿಸಿದ್ದಾರೆ. ಬೆಂಗಳೂರಿನ ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್, ಡಿಜೈನ್ ಆಂಡ್ ಟೆಕ್ನಾಲಜಿ –ಮಾಹೆ ಪ್ರಾಧ್ಯಾಪಕ ಹಾಗೂ ಖ್ಯಾತ ಕಪ್ಪೆ ತಜ್ಞ, ಡಾಕ್ಟರ್ ಕೆ.ವಿ.ಗುರುರಾಜ, 'ಜನವಿಜ್ಞಾನ'ದ ಭಾಗವಾಗಿ, ನಾಗರಿಕ ವಿಜ್ಞಾನಿಗಳಾದ ಸಿ.ಆರ್.ನಾಯ್ಕ ಹಾಗೂ ರಮೇಶ ಬಡಿಗೇರ, ಪಶ್ಚಿಮಘಟ್ಟದ ತಪ್ಪಲಿನ ನಿಶಾಚರಿ ಹಾಗೂ ಅಪರೂಪದ ಪ್ರಬೇಧದ, 35ನೇ ಕಪ್ಪೆ, ಕಾಳಿ ನೈಟ್ ಫ್ರಾಗ್ ಪತ್ತೆ ಹಚ್ಚಿದ್ದಾರೆ ಎಂದು, ಆಕಾಶವಾಣಿಗೆ ಮಾಹಿತಿ ನೀಡಿದ್ದಾರೆ.***

<><><>

**ಗೃಹ ಆರೋಗ್ಯ ಯೋಜನೆ ಅಡಿ,** ಆಶಾ ಕಾರ್ಯಕರ್ತೆಯರು, ರಾಜ್ಯದ 60 ಲಕ್ಷದ 38 ಸಾವಿರಕ್ಕೂ ಹೆಚ್ಚು ಮನೆಗಳಿಗೆ ಭೇಟಿ ನೀಡಿ, 1 ಕೋಟಿ 33 ಲಕ್ಷಕ್ಕೂ ಅಧಿಕ ಜನರಲ್ಲಿ, ಆರೋಗ್ಯ ಜಾಗೃತಿ ಮೂಡಿಸಿದ್ದಾರೆ ಎಂದು, ಆರೋಗ್ಯ ಖಾತೆ ಸಚಿವ, ದಿನೇಶ ಗುಂಡೂರಾವ, ತಿಳಿಸಿದ್ದಾರೆ. ಸದ್ದಿಲ್ಲದೇ ದೇಹವನ್ನು ಆವರಿಸುವ, ಅಸಾಂಕ್ರಾಮಿಕ ರೋಗಗಳನ್ನು, ಆರಂಭಿಕ ಹಂತದಲ್ಲೇ ಪತ್ತೆ ಹಚ್ಚಿ, ಅಮೂಲ್ಯ ಜೀವಗಳನ್ನು ಉಳಿಸುವುದೇ, ಈ ಯೋಜನೆಯ ಉದ್ದೇಶ ಎಂದು, ಎಕ್ಸ್ ಮಾಧ್ಯಮದಲ್ಲಿ ಹೇಳಿದ್ದಾರೆ.

<><><>

**1 ಕೋಟಿ 4 ಸಾವಿರ ಜನರಿಗೆ,** ರಕ್ತದೊತ್ತಡ ಹಾಗೂ 1 ಕೋಟಿ ಜನರಿಗೆ ಮಧುಮೇಹದ ತಪಾಸಣೆ ನಡೆಸಲಾಗಿದೆ. ಈ ಎರಡೂ ಕಾಯಿಲೆಗಳಿಗೆ ಸಂಬಂಧಿಸಿ, 44 ಲಕ್ಷಕ್ಕೂ ಅಧಿಕ ಜನ, ಆರೋಗ್ಯ ಯೋಜನೆ ಅಡಿ, ಚಿಕಿತ್ಸೆ ಪಡೆಯುತ್ತಿದ್ದಾರೆ, ಎಂದಿದ್ದಾರೆ.

<><><>

**ಬಾಯಿ ಕ್ಯಾನ್ಸರ್ ಸಂಬಂಧಿಸಿ,** ಪ್ರಸ್ತುತ 5 ಸಾವಿರದ 3 ನೂರಾ 75 ಜನ, ಸ್ತನ ಕ್ಯಾನ್ಸರ್‌ಗೆ, 4 ಸಾವಿರದ 542 ಮಹಿಳೆಯರಿಗೆ ಹಾಗೂ ಗರ್ಭಕಂಠದ ಕ್ಯಾನ್ಸರ್‌ಗೆ, ಪ್ರಸ್ತುತ 2 ಸಾವಿರದ 42 ಮಹಿಳೆಯರಿಗೆ, ಚಿಕಿತ್ಸೆ ನೀಡಲಾಗುತ್ತಿದೆ ಎಂದು, ಸಚಿವ ದಿನೇಶ ಗುಂಡೂರಾವ ಪ್ರಕಟಿಸಿದ್ದಾರೆ.

<><><>

**ವಿಶಿಷ್ಟ ಸ್ವಾದ ಹೊಂದಿರುವ,** ಕಲಬುರಗಿ ಜೋಳದ ರೊಟ್ಟಿ, ತನ್ನ ಮಾರುಕಟ್ಟೆಯನ್ನು, ಮತ್ತಷ್ಟು ವಿಸ್ತರಿಸಿಕೊಂಡು, ಆನ್‌ಲೈನ್‌ನಲ್ಲಿಯೂ ಲಭ್ಯವಿರುವ, ಖಡಕ್ ರೊಟ್ಟಿಗೆ ವಿದೇಶಗಳಿಂದ ಹೆಚ್ಚಿನ ಬೇಡಿಕೆ ಬರುತ್ತಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ, ಎಕ್ಸ್ ಮಾಧ್ಯಮದಲ್ಲಿ ಸಂತಸ ವ್ಯಕ್ತಪಡಿಸಿದ್ದಾರೆ.ಖಡಕ್ ರೊಟ್ಟಿಯ ರುಚಿ, ಆರೋಗ್ಯಕರವಷ್ಟೇ ಅಲ್ಲ, ಅದು ಕಲಬುರಗಿ ಮಹಿಳೆಯರ ಸಬಲೀಕರಣದ ಹೆಗ್ಗುರುತು. ಅಮೆರಿಕ, ಯು.ಕೆ. ಮತ್ತು ಆಸ್ಟ್ರೇಲಿಯಾ ಮಾರುಕಟ್ಟೆಗಳನ್ನು ಪ್ರವೇಶಿಸುತ್ತಿದೆ. ಈ ದೇಶಗಳಿಗೆ, ತಲಾ 100 ರೊಟ್ಟಿಗಳ 10 ಬಾಕ್ಸ್‌ಗಳನ್ನು ಮಾದರಿಯಾಗಿ ರವಾನಿಸಲಾಗುತ್ತಿದೆ. ಕಲಬುರಗಿ ಮೂಲದ, ಆಸ್ಥಮ್ ಎಕ್ಸ್‌ಪೋರ್ಟ್ ಕಂಪನಿ, 4 ದೇಶಗಳಿಗೆ ಜೋಳದ ರೊಟ್ಟಿ ತಲುಪಿಸುತ್ತಿದೆ, ಎಂದಿದ್ದಾರೆ.

<><><>

**ಸ್ವಚ್ಛ ಭಾರತ ಅಭಿಯಾನದಡಿ,** "ಸಂಡೇಸ್ ಆನ್ ಬೈಸಿಕಲ್ಸ್" ಸ್ವಚ್ಛತಾ ಜಾಥಾ ವಿಜಯಪುರ ಜಿಲ್ಲಾ ಪಂಚಾಯಿತಿ ಆವರಣದಲ್ಲಿ, ಜರುಗಿತು. ಸಾರ್ವಜನಿಕರಲ್ಲಿ ಸ್ವಚ್ಛತೆ ಬಗ್ಗೆ ಅರಿವು ಹಾಗೂ ಆರೋಗ್ಯಕರ ನಗರ ಪರಿಸರ ಕಾಪಾಡಲು, ಕೈಜೋಡಿಸುವ ಸಂದೇಶಕ್ಕೆ, ಅಭಿಯಾನ ಸಾಕ್ಷಿಯಾಯಿತು. ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕ ಅಶೋಕ ಕಲಘಟಗಿ, ಸಹಾಯಕ ಯೋಜನಾಧಿಕಾರಿ ಅರುಣಕುಮಾರ ದಳವಿ ಸೇರಿದಂತೆ, ಜಿಲ್ಲಾ ಪಂಚಾಯಿತಿ ಸಿಬ್ಬಂದಿ, ಸ್ವಚ್ಛತಾ ಶ್ರಮದಾನ ಕೈಗೊಂಡರು.

<><><>

**ಮೈಸೂರಿನ ಕೆ.ಆರ್.ನಗರದ,** ಅರ್ಕೇಶ್ವರ ದೇಗುಲದ ಬಳಿ, ಕಾವೇರಿ ನದಿಯಲ್ಲಿಈಜಲು ತೆರಳಿದ್ದ, 6 ಜನ ಅಸುನೀಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ತೀವ್ರ ಸಂತಾಪ ವ್ಯಕ್ತಪಡಿಸಿ, ಮೃತರ ಕುಟುಂಬಕ್ಕೆ ತಲಾ 5 ಲಕ್ಷ ರೂಪಾಯಿ ಪರಿಹಾರ ಘೋಷಿಸಿದ್ದಾರೆ. ದುರ್ಘಟನೆಯಲ್ಲಿ ರಕ್ಷಿಸಲ್ಪಟ್ಟು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರು, ಆದಷ್ಟು ಬೇಗ ಗುಣಮುಖರಾಗಲಿ ಎಂದು, ಹಾರೈಸಿದ್ದಾರೆ.

<><><>

**ಚಾಮರಾಜನಗರ ಜಿಲ್ಲೆ,** ಮಲೈ ಮಹದೇಶ್ವರ ವನ್ಯಜೀವಿಧಾಮದ, ಹನೂರು ವಲಯದ, ಉಡುತೊರೆ ಜಲಾಶಯಕ್ಕೆ ನೀರು ಕುಡಿಯಲು ಹೋದ, ನಾಲ್ಕು ಕಾಡಾನೆಗಳು, ಕೆಸರಿನಲ್ಲಿ ಸಿಲುಕಿದ ಹಿನ್ನೆಲೆ, ಅರಣ್ಯ ಇಲಾಖೆ ಹಾಗೂ ಅಗ್ನಿಶಾಮಕ ದಳ ಸಿಬ್ಬಂದಿ, ಸತತ ಕಾರ್ಯಾಚರಣೆ ಮೂಲಕ, ಮೂರು ಆನೆಗಳನ್ನು ಮೇಲೆತ್ತುವಲ್ಲಿ ಯಶಸ್ವಿಯಾಗಿದ್ದಾರೆ. ಎರಡು ಆನೆಗಳು ಅರಣ್ಯದತ್ತ ತೆರಳಿದ್ದು, ಒಂದಾನೆ ತೀವ್ರ ನಿತ್ರಾಣಗೊಂಡಿದೆ. ಪಶು ವೈದ್ಯರು ಚಿಕಿತ್ಸೆ ನೀಡುತ್ತಿದ್ದಾರೆ ಎಂದು, ಮಲೈ ಮಹದೇಶ್ವರ ವನ್ಯಜೀವಿಧಾಮದ, ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ, ಭಾಸ್ಕರ ತಿಳಿಸಿದ್ದಾರೆ.

<><><>

**2011 ರಿಂದ 2025ರ ಜುಲೈ ಅವಧಿಯಲ್ಲಿ,** ಸಾವಿರದ 26 ಜನ, ಸಿಡಿಲಾಘಾತದಿಂದ, ಬಲಿಯಾಗಿದ್ದಾರೆ ಎಂದು, ರಾಜ್ಯ ವಿಪತ್ತು ನಿರ್ವಹಣಾ ಕೇಂದ್ರದ, ಆಯುಕ್ತೆ ಎಸ್.ಹೊನ್ನಾಂಬಾ ಕಳವಳ ವ್ಯಕ್ತಪಡಿಸಿದ್ದಾರೆ.

<><><>

**ಕೃ ್ಣ ಮೇಲ್ದಂಡೆ ಯೋಜನೆ,** ಭೂಸ್ವಾಧೀನ ಸಂತ್ರಸ್ತ ರೈತರ ನೆರವಿಗಾಗಿ, ವಿಜಯಪುರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಮೂರು ತಿಂಗಳ ಜನತಾ ನ್ಯಾಯಾಲಯ ಆರಂಭಿಸಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ, ಎಂ.ಬಿ.ಪಾಟೀಲ ತಿಳಿಸಿದ್ದಾರೆ.

<><><>

**ಸ್ವಚ್ಛ ಸರ್ವೇಕ್ಷಣ** ಶ್ರೇಯಾಂಕದಲ್ಲಿ, ಉತ್ತಮ ಸ್ಥಾನಗಳಿಸುವ ಮತ್ತು ಬೆಂಗಳೂರು ನಗರವನ್ನು ತ್ಯಾಜ್ಯ ಮುಕ್ತಗೊಳಿಸಲು, ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ, ವಿಶೇ ್ ಸ್ವಚ್ಛತಾ ಅಭಿಯಾನ ನಡೆಯಿತು.

<><><>

**ಕೋಲಾರ ಜಿಲ್ಲಾ ವಿಪತ್ತು ನಿರ್ವಹಣಾ** ಪ್ರಾಧಿಕಾರ, ಬೇಸಿಗೆ ಹಿನ್ನೆಲೆ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ಕುಡಿಯುವ ನೀರಿನ ನಿರ್ವಹಣಾ ಸಮಿತಿ ರಚಿಸಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ನಾಡಿನ ಸಾಂಸ್ಕೃತಿಕ ನಾಯಕ,** ಜಗಜ್ಯೋತಿ ಶ್ರೀ ಬಸವೇಶ್ವರರ ಜಯಂತ್ಯುತ್ಸವ; ನಾಡಿನಾದ್ಯಂತ ಸಂಭ್ರಮ; ಗಣ್ಯರ ಶುಭಾಶಯ.
- **ಪಶ್ಚಿಮಘಟ್ಟದ, ಅಪರೂಪದ,** ನಿಶಾಚರಿ ಕಪ್ಪೆ ಪ್ರಭೇದಕ್ಕೆ, 'ಕಾಳಿ ಇರುಳುಗಪ್ಪೆ' ಎಂದು, ನಾಮಕರಣ.
- **ಗೃಹ ಆರೋಗ್ಯ ಯೋಜನೆ:** ಆಶಾ ಕಾರ್ಯಕರ್ತೆಯರಿಂದ, ರಾಜ್ಯದ 60 ಲಕ್ಷದ 38 ಸಾವಿರ ಮನೆ ಭೇಟಿ, ಆರೋಗ್ಯ ಜಾಗೃತಿ.
- **ಕಲಬುರಗಿ ಜೋಳದ ರೊಟ್ಟಿ:** ನಾಲ್ಕು ರಾಷ್ಟ್ರಗಳಿಗೆ ರಫ್ತು.

<><><>